**1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ನಂ.1666/2022.**

| | | | |
|---|---|---|---|
| ಸಾಕ್ಷಿದಾರರ ಹೆಸರು | ಡಿ.ಎಸ್. ಗೋವಿಂದಸ್ವಾಮಿ | | |
| ತಂದೆಯ ಹೆಸರು | ಸತ್ತಪ್ಪ | | |
| ವಯಸ್ಸು | 53 ವರ್ಷ | | |
| ವೃತ್ತಿ | ಎಎಸ್.ಐ | ಚಾಸಾ | 4 |
| ವಾಸಸ್ಥಳ | ಬಾಳೆಹೊನ್ನೂರು, ಎನ್.ಆರ್.ಪುರ | ಪ್ರಾಸಾ | 3 |

**ದಿನಾಂಕಃ 21.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಎ ಪಿ ಪಿ ರವರಿಂದ** :-

ನಾನು 2020 ರಿಂದ 2024 ರವರೆಗೆ ಸಿಂಗಟಗೆರೆ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 29.01.2022 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು, 5 ಮತ್ತು 6 ರವರುಗಳು ಚಾಸಾ-1 ರವರೊಂದಿಗೆ ಸೋಮನಹಳ್ಳಿ ತಾಂಡ್ಯದಲ್ಲಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರಿಗೆ ರವಿ ಬಿನ್ ಚೆಲುವಪ್ಪ ಎಂಬುವವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ಚಾಸಾ-1 ರವರು ಸದರಿ ವಿಚಾರಗಳನ್ನು ನಮಗೆ ತಿಳಿಸಿ ಸ್ಥಳಕ್ಕೆ ಹೋಗಿ ಸೋಮನಹಳ್ಳಿ ಗ್ರಾಮದ ಅರಳಿ ಮರದ ಕೆಳಗೆ ಕುತಿಳಿದ್ದ ಚಾಸಾ-2 ಮತ್ತು 3 ರವರಿಗೆ ಮಾತಿಯನ್ನು ತಿಳಿಸಿ ದಾಳಿಗೆ ಸಹಕರಿಸುವಂತೆ ಕೋರಿ ಚಾಸಾ-1 ರವರು ನೋಟೀಸ್ ನೀಡಿರುತ್ತಾರೆ.

ನಂತರ ಚಾಸಾ 2 ಮತ್ತು 3 ರವರೊಂದಿಗೆ ನಾವು ಸಂಜೆ 6 ಗಂಟೆ ಸಮಯದಲ್ಲಿ ಆರೋಪಿ ಮನೆಯ ಬಳಿ ಹೋಗಿ ಸ್ವಲ್ಪ ದುಾರದಲ್ಲಿ ವಾಹನ ನಿಲ್ಲಿಸಿದಾಗ ಆರೋಪಿಯು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದರು. ನಂತರ ನಾವುಗಳು ಆರೋಪಿಯನ್ನು

ಹಿಡಿದು ಅವರ ಹೆಸರು ವಿಳಾಸ ಕೇಳಿದಾಗ ಆತ ರವಿ ಬಿನ್ ಚೆಲುವಮೂರ್ತಿ, ಸೋಮನಹಳ್ಳಿ ಗ್ರಾಮ ಎಂದು ತಿಳಿಸಿದರು. ನಿಮ್ಮ ಬಳಿ ಇರುವ ವಸ್ತುಗಳನ್ನು ಪರಿಶೀಲನೆ ಮಾಡಬೇಕು ಎಂದು ಪರಿಶೀಲನೆ ಮಾಡಿದಾಗ ಆತನ ಕೈನಲ್ಲಿ ಹಸಿರು-ಹಳದಿ ಮಿಶ್ರಿತ ಪ್ಲಾಸ್ಟಿಕ್ ಚೀಲವಿತ್ತು, ಅದರಲ್ಲಿ 90 ಎಂ.ಎಲ್.ನ 46 ರಾಜಾವಿಸ್ಕಿ ಪೌಚುಗಳು ಇರುವುದು ಕಂಡುಬಂದವು. ಸದರಿ ಮದ್ಯ ಮಾರಾಟ ಮಾಡಲು ಪರವಾನಗೆ ಇದೆಯೇ ಎಂದು ಆತನನ್ನು ಕೇಳಿದಾಗ ಯಾವುದೇ ಪರವಾನಗೆ ಇಲ್ಲ ಎಂದು ಉತ್ತರಿದರು. ಸದರಿ ಮದ್ಯವನ್ನು ಎಲ್ಲಿಂದ ತಂದಿರಿರುತ್ತೀರಿ ಎಂದು ಕೇಳಿದಾಗ ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲ. ನಂತರ ಸಂಜೆ 6.10 ರಿಂದ 6.40 ಗಂಟೆ ವರೆಗೂ ವರದಿಯನ್ನು ತಯಾರಿಸಿ ಚಾಸಾ.6 ರವರ ಮುಖಾಂತರ ಠಾಣೆಗೆ ಕಳುಹಿಸಿರುತ್ತೇನೆ.

ನಂತರ ಠಾಣೆಗೆ ಕರೆ ಮಾಡಿ ಮೊಕದ್ದಮೆ ನಂಬರ್ ತಿಳಿದುಕೊಂಡು ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 7.05 ಗಿಂದ 7.35 ಗಂಟೆಯವರೆಗೂ ಮಹಜರ್ ಮಾಡಿ ಸದರಿ ಮದ್ಯದ ಪಾಕೆಟುಗಳನ್ನು ಅಮಾನತುಪಡಿಸಿಕೊಂಡು ಸದರಿ ಚೀಲದಲ್ಲಿ ಹಾಕಿ ಪಿ ಎಂಬ ಅಕ್ಷರದಿಂದ ಸೀಲು ಮಾಡಲಾಗಿರುತ್ತಾರೆ. ಸಾಕ್ಷಿಯು ನಿಪಿ.3 ರ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.3 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ.4 ರ ಛಾಯಾಚಿತ್ರದಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ಪೋಟೋ ತೆಗೆಸಿರುತ್ತಾರೆ. ಚಾಸಾ-1 ಮತ್ತು ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ಮತ್ತು ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಚಾಸಾ-11 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ. ಎನ್.ಎಸ್ ವಕೀಲರಿಂದಃ</u>**

ಚಾಸಾ-1 ರವರಿಗೆ ಯಾವುದಾದರು ಖಚಿತ ಮಾಹಿತಿ ಬಂದರೆ ತಕ್ಷಣ ಪ್ರ.ವ.ವರದಿ ದಾಖಲಿಸಬೇಕು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿಯೂ ಮಾಹಿತಿ ಆಧಾರದ ಮೇರೆಗೆ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ಮಾಹಿತಿ ಬಂದಾಗ ನಾವು ಸೋಮನಹಳ್ಳಿ ತಾಂಡ್ಯದಲ್ಲಿ ಇದ್ದೆವು. ಸದರಿ ಸ್ಥಳದಿಂದ ಸೋಮನಹಳ್ಳಿ ಗ್ರಾಮಕ್ಕೆ ಸುಮಾರು 4 ಕಿ ಮೀ ಅಂತರವಿದೆ. ನಾವು ಸೋಮನಹಳ್ಳಿ ತಾಂಡ್ಯದಿಂದ ಸೋಮನಹಳ್ಳಿ ಗ್ರಾಮಕ್ಕೆ ಹೋಗುವಾಗ ಜನರು ಓಡಾಡುತ್ತಿದ್ದರು. ಸದರಿ ಜನರನ್ನು ಚಾಸಾ-1 ರವರು ಪಂಚರಾಗಿ ಕರೆಯುವ ಪ್ರಯತ್ನ

ಮಾಡಿರುವುದಿಲ್ಲ. ನಿಪಿ.4 ಫೋಟೋವನ್ನು ಮಹಜರ್ ಕಾಲದಲ್ಲಿ ತೆಗೆಸಲಾಗಿರುತ್ತದೆ. ನಿಪಿ4 ಫೋಟೋವನ್ನು ಚಾಸಾ–1 ರವರು ಸಂಜೆ 7.10 ಗಂಟೆಗೆ ತೆಗೆಸಲಾಗಿರುತ್ತದೆ. ಸದರಿ ಛಾಯಾಚಿತ್ರವನ್ನು ವಿದ್ಯುತ್ ಕಂಬದ ಬೆಳಕಿನ ಸಹಾಯದಿಂದ ಮತ್ತು ಮೊಬೈಲ್ ಬೆಳಕಿನ ಸಹಾಯದಿಂದ ತೆಗೆಯಲಾಗಿರುತ್ತದೆ. ಮೊಬೈಲಿನಿಂದ ಛಾಯಾಚಿತ್ರವನ್ನು ತೆಗೆಯಲಾಗಿರುತ್ತದೆ. ನಿಪಿ.4 ರ ಛಾಯಾಚಿತ್ರವನ್ನು ಮೊಬೈಲಿನಿಂದ ತೆಗೆದಿದ್ದರೆ ದಿನಾಂಕ ಮತ್ತು ಸಮಯ ತೋರಿಸಿತ್ತು ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ಮಹಜರಿನಲ್ಲಿ ನಮೂದಿಸಿದಂತೆ ಲೈಟ್ ಕಂಬ ಕಾಣುತ್ತಿಲ್ಲ ಎಂದರೆ ಸರಿ. ನಿಪಿ.4 ರ ಛಾಯಾಚಿತ್ರವನ್ನು ಲೈಟ್ ಬೆಳಕಿನಿಂದ ತೆಗೆದ ರೀತಿ ಕಾಣುತ್ತಿಲ್ಲ ಅದು ಹಗಲುವೇಳೆಯಲ್ಲಿ ತೆಗೆದಿರುವ ರೀತಿ ಕಾಣುತ್ತಿದೆ ಎಂದರೆ ಸರಿಯಲ್ಲ. ನಾವು ಆರೋಪಿಯನ್ನು ಹಿಡಿದಾಗ ಸಂಜೆ 6.00 ಗಂಟೆಯಾಗಿತ್ತು.

ಆರೋಪಿಯಿಂದ ಮು ಮಾ 1 ನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರನ್ನು ಸ್ಥಳದಲ್ಲಿ ತಯಾರು ಮಾಡಿರುವುದಿಲ್ಲ, ಠಾಣೆಯಲ್ಲಿ ತಯಾರು ಮಾಡಿ ಠಾಣೆಯಲ್ಲಿಯೇ ಪಂಚರ ಸಹಿ ಪಡೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ–1 ರವರು ಠಾಣೆಗೆ ಯಾವುದೇ ವರದಿ ಕಳುಹಿಸಿಕೊಟ್ಟಿರುವುದಿಲ್ಲ ನಂತರ ಈ ಪ್ರಕರಣಕ್ಕೆ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿಪಿ.3 ರ ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಮು.ಮಾ.1 ಕ್ಕೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಠಾಣಾ ಅಂಕಿಅಂಶಕ್ಕಾಗಿ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು ಅದಕ್ಕೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಒ,

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.,ರವರು, ಕಡೂರು.